

ಕಲೆ: ದೀಕ್ಷಿತ್ ಪಿ.

ಪಾವಿತ್ರ್ಯಕ್ಕೆ ಭಂಗ ಬಂತೇ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗುತ್ತದೆ. ಜೊತೆಗೆ, ಆಧುನಿಕ ಭಾಷಾ ಶಾಸ್ತ್ರಜ್ಞರು ಹೇಳುವ- 'ಇದು ನಿಜವಾಗಿ ಧಾರ್ಮಿಕ ಭಾವನೆಗಳೊಡನೆ ಸಂಬಂಧ ಹೊಂದಿಲ್ಲ. ಒಂದು ಭಾಷೆಯನ್ನು ಕಲಿಯಲು ಹಾಕುವ ಪ್ರೀತಿ ಮತ್ತು ಶ್ರಮವು ಆ ಭಾಷೆಯನ್ನು ಕಲಿಸಲು ಯಾರನ್ನಾದರೂ ಅರ್ಹರನ್ನಾಗಿ ಮಾಡುತ್ತದೆ' ಎಂಬ ಮಾತನ್ನು ತಿರಸ್ಕರಿಸುತ್ತದೆ. ಇವೆಲ್ಲದರ ಒಟ್ಟು ಅರ್ಥ ಇಷ್ಟೆ- ಧರ್ಮ ಮತ್ತು ಭಾಷೆಯ ನಡುವಣ ಸಂಬಂಧಗಳು ನಿರಂತರವಾಗಿ ಬದಲಾಗುತ್ತಲೇ ಇರುತ್ತವೆ. ಅವು ಕಾಲ, ದೇಶ, ಸಮುದಾಯ ಮತ್ತು ವ್ಯಕ್ತಿಗಳ ಅಗತ್ಯಗಳಿಗೆ ಅನುಗುಣವಾಗಿ ತಮ್ಮನ್ನು ಮರು ವ್ಯಾಖ್ಯಾನಿಸಿಕೊಂಡು ಬೆಳೆಯುತ್ತವೆ. ಈ ಕಾರಣಗಳಿಂದಲೇ ವೇದಗಳನ್ನು ಆಧರಿಸಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ಶಕ್ತಿ ವಿಶಿಷ್ಟಾದ್ವೈತ, ದ್ವೈತಾದ್ವೈತ, ಶುದ್ಧಾದ್ವೈತ ಮೊದಲಾದುವುಗಳು ಹುಟ್ಟಿಕೊಂಡವು. ಇವು ಮೂಲತ: ಧಾರ್ಮಿಕ ಭಾಷೆಯನ್ನು ವಿರಚಿಸಿಕೊಂಡು ಮತ್ತೆ ಕಟ್ಟುವ ಬಗೆಯೂ ಆಗಿದೆ. ಆದರೆ, ಸಂಪ್ರದಾಯಸ್ಥರು ಇದನ್ನು ಒಪ್ಪುವುದಿಲ್ಲ.

## ಇತರ ಭಾಷೆಗಳ ಪಯಣ

ಹಿಂದೂ ಧರ್ಮದ ಹಾಗೆಯೇ ಇತರ ಧರ್ಮಗಳು ಕೂಡಾ ತಮಗೆ ವಿಶಿಷ್ಟವಾದ ಭಾಷೆಗಳನ್ನು ಸೃಷ್ಟಿಸಿ ಕೊಂಡಿವೆ. ಎಲ್ಲ ಧರ್ಮಗಳೂ ದೇವರನ್ನು ಸರ್ವಶಕ್ತ ಎಂದು ನಂಬುತ್ತವೆ. ಆದರೆ ಆ ದೇವರು ಯಾವ ಭಾಷೆಯಲ್ಲಿ ಜನಗಳೊಡನೆ ಮಾತಾಡುತ್ತಾರೆ? ಸಂಸ್ಕೃತ, ಅರೇಬಿಕ್, ಗ್ರೀಕ್, ಕನ್ನಡ, ತಮಿಳು, ತುಳು ಎಂದೆಲ್ಲಾ ಹೇಳಬಹುದು. ಪ್ರಪಂಚದ ಪ್ರತಿಯೊಂದು ಶಬ್ದವೂ ದೇವರ ಧ್ವನಿಯೇ ಆಗಿದೆ ಎಂದು ವೈಯಾಕರಣಿಗಳೂ, ಮೌನವೇ ದೇವರ ಭಾಷೆ ಎಂದು ಸೂಫಿಗಳೂ ಹೇಳಿದ್ದಾರೆ. ಪ್ರಕೃತಿಯ